2/2

# Mindtree
*Welcome to possible*

# ಮೈಂಡ್‌ಟ್ರೀ ಲಿಮಿಟೆಡ್

ನೋಂದಾಯಿತ ಕಚೇರಿ : ಗ್ಲೋಬಲ್ ವಿಲೇಜ್, ಆರ್‌ವಿಸಿಇ ಅಂಚೆ, ಮೈಸೂರು ರಸ್ತೆ, ಬೆಂಗಳೂರು – 560 059. ಕರ್ನಾಟಕ, ಭಾರತ
ಕಾರ್ಪೊರೇಟ್ ಗುರುತಿನ ಸಂಖ್ಯೆ (CIN): L72200KA1999PLC025564 | ದೂರವಾಣಿ : +91 80 6706 4000,
ಇ-ಮೇಲ್: investors@mindtree.com |ವೆಬ್‌ಸೈಟ್: www.mindtree.com

## ಸೂಚನೆ

### 18ನೇ ವಾರ್ಷಿಕ ಮಹಾ ಸಭೆ, ರಿಮೋಟ್ ಇ- ಮತದಾನ ಮತ್ತು ಬುಕ್ ಕ್ಲೋಸರ್ ಬಗ್ಗೆ ಸೂಚನೆ

ಈ ಸೂಚನೆಯ ಮೂಲಕ ತಿಳಿಸುವುದೇನೆಂದರೆ, ಕಂಪನಿಯ ಸದಸ್ಯರ 18ನೇ ವಾರ್ಷಿಕ ಮಹಾ ಸಭೆಯು ಮಂಗಳವಾರ ಜುಲೈ 18, 2017 ರಂದು ಭಾರತೀಯ ಕಾಲಮಾನ ಬೆಳಿಗ್ಗೆ 10.30ಕ್ಕೆ ಹೋಟೆಲ್ ರ್‍ಯಾಡಿಸನ್ ಬ್ಲೂ ಅಟ್ರಿಯ, ಬೆಂಗಳೂರು, ನಂ. 1, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ನಡೆಯಲಿದ್ದು, ಇದರಲ್ಲಿ 18ನೇ ಎಜಿಎಂನ ಸೂಚನ ಪತ್ರದಲ್ಲಿ ತಿಳಿಯಪಡಿಸಿದ ವ್ಯವಹಾರ ನಡೆಸಲಾಗುತ್ತದೆ.

ಸೆಕ್ಷನ್ 91ರ ಕಂಪನಿ ಕಾಯ್ದೆ, 2013 ನ್ನು ಓದಿಕೊಂಡಂತೆ ಆರ್ಥಿಕ ವರ್ಷ ಮುಕ್ತಾಯಗೊಂಡ ಮಾರ್ಚ್ 31, 2017 ರವರೆಗೆ ಡಿವಿಡೆಂಡ್ ಗೆ ಅರ್ಹರಾಗಿರುವ ಷೇರುದಾರರ ಪಟ್ಟಿಯನ್ನು ಅಂತಿಮಗೊಳಿಸಲು ಕಂಪನಿಯ ಸದಸ್ಯರುಗಳ ರಿಜಿಸ್ಟರನ್ನು ಬುಧವಾರ ಜುಲೈ 12, 2017 ರಿಂದ ಮಂಗಳವಾರ ಜುಲೈ 18, 2017ರವರೆಗೆ (ಎರಡೂ ದಿನಗಳು ಸೇರಿ) ಮುಚ್ಚಲಾಗುತ್ತದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) ಸೆಕ್ಷನ್ 20 ಮತ್ತು 101ರ ಕಂಪನಿ ಕಾಯಿದೆ 2013ನ್ನು ಓದಿಕೊಂಡಂತೆ ನಿಯಮ 35 ರ ಕಂಪನಿಯ ನಿಯಮ 2014 ರ ಅನ್ವಯ ವಿದ್ಯುನ್ಮಾನದ ಮೂಲಕ ದಾಖಲೆಗಳನ್ನು ನೀಡಲು ಅನುಮತಿ ನೀಡಿದೆ.

ಇದಕ್ಕೆ ಸಂಬಂಧಿಸಿದಂತೆ, ಅನುಕೂಲಕರ ವಾತಾವರಣಕ್ಕನುಗುಣವಾಗಿ ನಾವು 2016–17ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮಾಧ್ಯಮ ಇ–ಮೇಲ್ ಗಳ ಮೂಲಕ ಕಂಪನಿ / ರಿಜಿಸ್ಟ್ರಾರ್ ಆಂಡ್ ಷೇರ್ ಟ್ರಾನ್ಸ್‌ಫರ್ ಏಜೆಂಟರ (ಆರ್‌ಟಿಎ) / ಡೆಪಾಸಿಟರಿ ಪಾರ್ಟಿಸಿಪೆಂಟ್ ಬಳಿ ನೋಂದಾಯಿತವಾದ ಇ–ಮೇಲ್ ಗಳಿಗೆ ಕಳುಹಿಸಲಾಗಿದೆ. ಒಂದು ವೇಳೆ ಭೌತಿಕವಾಗಿ ಅದರ ಪ್ರತಿಯನ್ನು ಪಡೆದುಕೊಳ್ಳಬೇಕೆಂದು ಇಚ್ಛಿಸಿದ್ದಲ್ಲಿ 2016–17ರ ವಾರ್ಷಿಕ ವರದಿಗಾಗಿ investor@mindtree.com ಅಥವಾ ನಮ್ಮ ಆರ್‌ಟಿಎ ಲಿಂಕ್ ಇನ್ ಟೈಮ್ rnt.helpdesk@linktime.co.in ಯನ್ನು ಸಂಪರ್ಕಿಸಬಹುದಾಗಿದೆ.

ಕಂಪನಿಯು ಜೂನ್ 16 ಹಾಗೂ 17, 2017 ರಂದು ಭೌತಿಕವಾಗಿ ಹಾಗೂ ಜೂನ್ 19, 2017 ವಿದ್ಯುನ್ಮಾನ ಮಾಧ್ಯಮದ ಮೂಲಕ ಎಲ್ಲರಿಗೂ ಮೇಲೆ ತಿಳಿಸಿದ ಮೀಟಿಂಗ್‌ನ ನೋಟಿಸ್ ಮತ್ತು ಹಾಜರಾತಿ ಚೀಟಿ ಹಾಗೂ ಪ್ರಾಕ್ಸಿ ಫಾರ್ಮ್ಸ್ ಗಳನ್ನು ಕಳುಹಿಸಿಕೊಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ.

ಇದಕ್ಕೆ ಸಂಬಂಧಿಸಿದಂತೆ ಸೆಕ್ಷನ್ 108ರ ಕಂಪನಿ ಕಾಯಿದೆ 2013ನನ್ನು ಓದಿಕೊಂಡಂತೆ ನಿಯಮ 20ರ ಕಂಪನಿ ನಿಯಮಗಳಂತೆ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014 ಮತ್ತು ರೆಗ್ಯುಲೇಶನ್ 44 ರ ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್) ರೆಗ್ಯುಲೇಶನ್ 2015 ರಂತೆ, ಕಂಪನಿಯು ತನ್ನ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಮುಖಾಂತರ ವ್ಯವಸ್ಥೆಗೊಳಿಸಿದೆ.

| | |
|---|---|
| ಇ–ವೋಟಿಂಗ್ ಆರಂಭವಾಗುವ ದಿನಾಂಕ ಮತ್ತು ಸಮಯ | ಶನಿವಾರ ಜುಲೈ 15, 2017 ಭಾರತೀಯ ಕಾಲಮಾನ ಬೆಳಿಗ್ಗೆ 10.ಕ್ಕೆ |
| ಇ–ವೋಟಿಂಗ್ ಮುಕ್ತಾಯದ ದಿನಾಂಕ ಮತ್ತು ಸಮಯ | ಸೋಮವಾರ ಜುಲೈ 17, ಭಾರತೀಯ ಕಾಲಮಾನ ಸಂಜೆ 5.00 ಕ್ಕೆ<br>ಸೂಚನೆ: ಈ ದಿನಾಂಕದ ನಂತರ ಇ–ವೋಟಿಂಗ್ ವಿಧಾನವನ್ನು ಅಂತ್ಯಗೊಳಿಸಲಾಗುತ್ತಿದ್ದು, ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಯಾವುದೇ ಸದಸ್ಯರು ಮತದಾನ ಮಾಡಲು ಸಾಧ್ಯವಾಗುವುದಿಲ್ಲ. |
| 18ನೇ ಎಜಿಎಂಗೆ ಮತದಾನ ಮಾಡಲು ಅರ್ಹತೆಯ ಬಗ್ಗೆ ಅಂತಿಮ ದಿನಾಂಕ | ಮಂಗಳವಾರ ಜುಲೈ 11, 2017 |

ಸದಸ್ಯರು ಗಮನಿಸಬೇಕಾದ ಅಂಶವೆಂದರೆ, ಎನ್‌ಎಸ್‌ಡಿಎಲ್ ಮತ್ತು ಸಿಡಿಎಸ್‌ಎಲ್ ನಿಂದ ತಯಾರಿಸಲ್ಪಟ್ಟ ಪಟ್ಟಿಯ ಅನುಸಾರವಾಗಿ ಹೆಸರಿಸಲ್ಪಟ್ಟಿರುವ ವ್ಯಕ್ತಿಗಳು ಮಾತ್ರ ಮೇಲೆ ಹೇಳಿದ ಅಂತಿಮ ದಿನಾಂಕ ಅಂದರೆ ಮಂಗಳವಾರ, ಜುಲೈ 11, 2017 ರಂದು ಸೂಚನೆಯಲ್ಲಿ ತಿಳಿಸಿರುವಂತೆ ಮತದಾನ ಮಾಡಲು ಅರ್ಹರಾಗಿರುತ್ತಾರೆ. ಒಂದು ಬಾರಿ ಸದಸ್ಯರು ಮತದಾನ ಮಾಡಿದ ನಂತರ, ಅದನ್ನು ಯಾವುದೇ ರೀತಿಯಲ್ಲಿ ಬದಲಾಯಿಸಲು ಸಾಧ್ಯವಾಗುವುದಿಲ್ಲ.

18ನೇ ಎಜಿಎಂ ನಲ್ಲಿ ಮತದಾನ ಮತಪತ್ರದ ಮೂಲಕ ನಡೆಯಲಿದ್ದು ಸದಸ್ಯರಿಗೆ ಮತಪತ್ರ ಲಭ್ಯವಾಗುವಂತೆ ನೋಡಿಕೊಳ್ಳಲಾಗುತದೆ. ಯಾವುದೇ ಸದಸ್ಯ ವಿದ್ಯುನ್ಮಾನ ಮತದಾನವನ್ನು ಈಗಾಗಲೇ ಮಾಡಿದ್ದಲ್ಲಿ, ಅಂಥವರು ಸಹ 18ನೇ ಎಜಿಎಂ ನಲ್ಲಿ ಭಾಗವಹಿಸಬಹುದು, ಆದರೆ, ಸಭೆಯಲ್ಲಿ ಮತದಾನ ಮಾಡಲು ಅರ್ಹರಾಗಿರುವುದಿಲ್ಲ.

ಯಾವುದೇ ವ್ಯಕ್ತಿಯೂ ಕೊನೆಯ ದಿನಾಂಕದ ನಂತರ ಸದಸ್ಯನಾಗಿ ಸೇರ್ಪಡೆಯಾದಲ್ಲಿ, ವೋಟಿಂಗ್ ಲಾಗಿನ್ ಐಡಿಯನ್ನು ಪಡೆದುಕೊಳ್ಳಲು ಒಂದು ಮನವಿಯನ್ನು ಇ–ಮೇಲ್ ಮೂಲಕ ಎನ್‌ಎಸ್‌ಡಿಎಲ್ ನ evoting@nsdl.co.in ಅಥವಾ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸಿ–101, 247, ಪಾರ್ಕ್, ಎಲ್‌ಬಿಎಸ್ ಮಾರ್ಗ್, ವಿಕ್ರೋಲಿ (ಪ), ಮುಂಬಯಿ – 400 083, ಭಾರತ, ದೂರವಾಣಿ + 91 2225946970, ಫ್ಯಾಕ್ಸ್ ; +91 222594 6969, ಇ–ಮೇಲ್ rnt.helpdesk@linkintime.co.in ಗೆ ಕಳುಹಿಸಿಕೊಡಬಹುದಾಗಿದೆ.

ಆದಾಗ್ಯೂ, ವ್ಯಕ್ತಿಯು ಇ–ವೋಟಿಂಗ್ ಈಗಾಗಲೇ ಎನ್‌ಎಸ್‌ಡಿಎಲ್ ನಲ್ಲಿ ನೋಂದಾಯಿತವಾಗಿದ್ದಲ್ಲಿ, ಆಗ ಅವರು ತಮ್ಮ ನೋಂದಾಯಿತ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಳಸಿ, ಮತದಾನ ಮಾಡಬಹುದಾಗಿದೆ.

ಮೇಲೆ ಹೇಳಿದ 18ನೇ ಎಜಿಎಂ ನೋಟಿಸ್ (ವಾರ್ಷಿಕ ವರದಿಯ ಭಾಗ) ಕಂಪನಿಯ ವೆಬ್‌ಸೈಟ್ http://www.mindtree.com/about-us/investors/annual-reports ಹಾಗೂ ಎನ್‌ಎಸ್‌ಡಿಎಲ್ ನ ವೆಬ್ ಸೈಟ್ www.evoting.nsdl.comನಲ್ಲಿ ಲಭ್ಯವಿರುತ್ತದೆ.

ಸದಸ್ಯರಿಗೆ ಹೆಚ್ಚಿನ ಮಾಹಿತಿಗಳೇನಾದರೂ ಅಗತ್ಯವಿದ್ದಲ್ಲಿ ಕಂಪನಿ ಕಾರ್ಯದರ್ಶಿ, ಗ್ಲೋಬಲ್ ವಿಲೇಜ್, ಆರ್ ವಿ ಸಿ ಇ ಅಂಚೆ, ಮೈಸೂರು ರಸ್ತೆ, ಬೆಂಗಳೂರು – 560 059, ಭಾರತ, ದೂರವಾಣಿ: 91 80 6706 4000 ಇ–ಮೇಲ್ investors@mindtree.com ಸಂಪರ್ಕಿಸಬಹುದಾಗಿದೆ.

ಆಡಳಿತ ಮಂಡಳಿಯ ಆದೇಶದ ಮೇರೆಗೆ
ಮೈಂಡ್‌ಟ್ರೀ ಲಿಮಿಟೆಡ್ ಪರವಾಗಿ

ದಿನಾಂಕ : ಜೂನ್ 21, 2017
ಸ್ಥಳ : ಬೆಂಗಳೂರು

ವೇದವಲ್ಲಿ ಎಸ್
ಕಂಪನಿ ಕಾರ್ಯದರ್ಶಿ

ಈ ಮೂಲಕ ಯಾವತ್ತೂ ಅರ್ಹ ಸಿವಿಲ್ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಗೆ

client and my client will proceed thereafter as if there are no claimants/objections.

SCHEDULE PROPERTY